JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಕೂಡಲೂರು ಬಸವಲಿಂಗ ಶರಣರು

**ಡಾ. ಶಾಂತಪ್ಪ ಎನ್. ಡಂಬಳ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿಸ್ತರಣಾ ಕೇಂದ್ರ, ದೇವದುರ್ಗ

ಜನರ ಮೌಖಿಕ ಪರಂಪರೆಯಲ್ಲಿ ಕೂಡಲೂರು ಬಸವಲಿಂಗ ಶರಣರು ಬಹುಮುಖ್ಯ ಆದವರು. ಇವರು ಯಾದಗಿರಿಯಿಂದ ಪೂರ್ವಕ್ಕೆ 16 ಕಿ ಮೀ ದೂರದಲ್ಲಿ ಮೈಲಾಪುರ ಎಂಬ ಗ್ರಾಮವಿದೆ. ಈ ಗ್ರಾಮದಿಂದ ಮುಂದೆ 9 ಕಿ ಮೀ ಅಂತರದಲ್ಲಿ ಬರುವ ಸುತ್ತಲೂ ಗುಡ್ಡಗಳಿಂದ ಕೂಡಿರುವ ಬಳಿಚಕ್ರ ಎಂಬ ಒಂದು ಹಳ್ಳಿಯಲ್ಲಿ ಮಹದೇವಪ್ಪ ಮತ್ತು ಗಂಗವ್ವ ಎಂಬ ದಂಪತಿಗಳ ಮಗನಾಗಿ 17ನೇ ಶತಮಾನದ ಕೊನೆಯಲ್ಲಿ ಜನಿಸುತ್ತಾನೆ.ಆದರೆ ಇವರ ಜನನದ ಮಿತಿ ಹಾಗೂ ಜೀವನ ಬಗೆಗೆ ಖಚಿತ ಮಾಹಿತಿ, ವಿವರಗಳಾಗಲಿ ಸಿಕ್ಕಿಲ್ಲ. "ಶ್ರೀಗುರು ಬಸವಲಿಂಗ ಶರಣರ ಜೀವನ ಚರಿತ್ರೆಯಲ್ಲಿ ಬರುವ ಯಾವ ಘಟನೆಗಳಿಗೂ ತಿಥಿ ಮಾಸ ವರ್ಷ ದೊರೆಯುವುದಿಲ್ಲ ಎಂದು ಬಳಿಚಕ್ರದವರೇ ಆದ ಕವಿ ಶ್ರೀ ನರಸಿಂಹ ಗುಪ್ತಾ ಅವರ ಅಭಿಪ್ರಾಯ. ಜನರು ಅವರ ಬಗೆಗೆ ತಲೆಮಾರುಗಳಿಂದ ಹೇಳುತ್ತ ಬಂದ ಕೆಲವು ಸಂಗತಿಗಳನ್ನು ಮಾತ್ರ ಸಂಗ್ರಹಿಸಬಹುದಾಗಿದೆ. ಈಗ ದೊರಕಿರುವ ಅವರ ಅನೇಕ ಹಾಡುಗಳಲ್ಲಿ ಅವರ ಜೀವನದ ಕೆಲವು ಸಂಗತಿಗಳು ಪರ್ಯಾಯವಾಗಿ ಗೋಚರಿಸುತ್ತವೆ. ಇದರ ಹೊರತಾಗಿ ಬೇರೆ ಅಧಿಕೃತ ಮೂಲಗಳಿಲ್ಲ ".[1]

ಜನರ ಪರಂಪರೆಯ ನಂಬಿಕೆಯಲ್ಲಿ ಬಸವಲಿಂಗ ಶರಣರು ಗೂಗಲ್ಲಿನಲ್ಲಿ ಪರಪ್ಪಯ್ಯನು ಭೇಟಿಯಾದರು ಅಲ್ಲಿಯೇ ವಾಸವಿದ್ದರು ಎಂದು ಸಮೀಕರಿಕೊಳ್ಳುತ್ತಾರೆ. ಆದರೆ ಬಸವಲಿಂಗ ಶರಣರ ಕಾಲಕ್ಕೆ ಪರಪ್ಪಯ್ಯನು ತೋರು ಗದ್ದುಗೆಯಾಗಿಯೇ ಇದ್ದರು ಎಂದು ಅರಿಯಬೇಕು. ಯಾಕಂದ್ರೆ ಈ ಶರಣರ ಕಾಲಕ್ಕೆ ಮುಂಚೆ ಅವರು ಅವದೂತ್ ಪರಂಪರೆ ಸಾದಿಸಿ ಅವರೂಕ್ಷ ಸ್ಥಿತಿ ತಲುಪಿ ಸಮಾಧಿ ಆಗಿರುವ ಪರಮಾನಂದನೆ ಪರಪ್ಪಯ್ಯನಾಗಿದ್ದ. ಈತನ ಗದ್ದುಗೆ ಅನೇಕ ಈ ಭಾಗಗಳಲ್ಲಿ ಸ್ಥಿತಿಪ್ರಜ್ಞೆ ರೂಪಾಂತರವಾಗಿ ಆಚರಣೆಯಲ್ಲಿ ಕಂಡುಬರುವ ಕಾರಣದಿಂದ ಬಸವಲಿಂಗ ಶರಣರು ಮೇಲೆ ಪ್ರಭಾವ ಇರಬಹುದು. ಇದನ್ನೇ ಜನರು ಅವರನ್ನ ಭೇಟಿಯಾಗಿ ತತ್ವಪದಗಳು ರಚನೆ ಮಾಡಿದರು ಎಂದು ನಿರೂಪಿಸಿಕೊಂಡಿರಬೇಕು.

"ಕೂಡಲೂರು ಬಸವಲಿಂಗ ಶರಣರ ಕಾಲ ಸುಮಾರು 18ನೆಯ ಶತಮಾನದ ಕೊನೆಯ ಭಾಗವೆಂದು ಸದ್ಯಕ್ಕೆ ಇಟ್ಟುಕೊಳ್ಳಬಹುದು",[2] ಎಂದು ಶ್ರೀ ಶಾಂತರಸರ ಅಭಿಪ್ರಾಯ. ಮತ್ತು ವಿವಿಧ ಕವಿಗಳ ಪಟ್ಟಿ ಇರುವ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ' ಸಂಪುಟ 5: ಪುಟ 480ರಲ್ಲಿ' 'ಕೂಡಲೂರು ಬಸವಲಿಂಗ –ಸುಮಾರು 1700',[3] ಎಂದು ಉಲ್ಲೇಖ ಮಾತ್ರವಿದೆ. ಬೇರೆ ಯಾವ ವಿವರವೂ ಇಲ್ಲ. ಈ ಉಲ್ಲೇಖ ಪ್ರಕಾರ ಬಸವಲಿಂಗ ಶರಣರ ಕಾಲ ಒಂದು ನೂರು ವರ್ಷ ಹಿಂದಕ್ಕೆ ಹೋಗುತ್ತೆ. ಆದರೆ ಈ ಉಲ್ಲೇಖಕ್ಕೆ ಜನಾಭಿಪ್ರಾಯವಾಗಲಿ, ಬೇರೆ ನಂಬುವ ಮೂಲಗಳಾಗಲಿ ಸಿಗುವುದಿಲ್ಲ.

ಹಾಗೆಯೇ "ಬಸಲಿಂಗಪ್ಪನವರು ಕಡಕೋಳ ಮಹಾಂತೇಶ್ವರಗಿಂತ 30 ವರ್ಷ ಹಿರಿಯರೆಂದು ಹಾಗೂ ಶರಣ ಬಸವೇಶ್ವರಗಿಂತ ಕಡಕೋಳ ಮಹಾಂತೇಶ್ವರ 20 ವರ್ಷ ಹಿರಿಯರೆಂದು ತಿಳಿದು ಬರುತ್ತದೆ ಎಂದು ಗೊಬ್ಬೂರು (ಬಿ) ಶ್ರೀ ರಾಜಶೇಖರ ಅವರ ಅಭಿಪ್ರಾಯ".[4] ಕಡಕೋಳ ಮಡಿವಾಳಪ್ಪನವರಿಗೆ ಕಡಕೋಳ ಮಹಾಂತೇಶ್ವರ ಎಂಬುದು ಇವರ ವಿಚಾರ. "ಕಡಕೋಳ ಮಡಿವಾಳಪ್ಪನವರ ಜನನ ಕ್ರಿ.ಶ. ಸುಮಾರು 1780"[5] ಎಂದು ಎಂ ಎಸ್ ಲಠ್ಠೆ ಅವರ ಅಭಿಪ್ರಾಯ. ಆದ್ದರಿಂದ

"ರಾಜಶೇಖರ ಹೇಳಿಕೆಯಂತೆ ಕೂಡಲೂರು ಬಸವಲಿಂಗ ಶರಣರು" ಕ್ರಿ. ಶ. ಸು.1750 ರಲ್ಲಿ"[6] ಜನಿಸಿದರು ಎಂದಾಗುವುದು. "ಶರಣಬಸವೇಶ್ವರರ ಜನನ ಕ್ರಿ. ಶ.1746ರಲ್ಲಿ ಆಗಿದೆ"[7] "ಈ ಆಧಾರದ ಮೇಲೆ ಕೂಡಲೂರು ಬಸವಲಿಂಗ ಶರಣರ ಜನನ ಕ್ರಿ.ಶ.1726 ರಿಂದ ಕ್ರಿ.ಶ.1731 ರ ಅವಧಿಯಲ್ಲಿ ಆಗಿರುವ ಸಂಭವವಿದೆ".[8] ಎಂದು ಎಂ ಜಿ ಶಾಸ್ತ್ರೀಮಠ ಅವರ ಅಭಿಪ್ರಾಯ.

ಹಾಗೇ ಬಸವರಾಜ ಸಬರದವರು 1770ರಿಂದ 1850 ರವರೆಗೆ ಬಸವಲಿಂಗಪ್ಪನವರು ಇದ್ದರೆಂದು ವ್ಯಕ್ತಪಡಿಸುತ್ತಾರೆ. ಇದೇ ಅಭಿಪ್ರಾಯವನ್ನು ಅನೇಕರ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಆದರೆ ಬಸವಲಿಂಗಪ್ಪನವರು ಬಲಿಚಕ್ರದಲ್ಲಿ ಜನಿಸಿದರೂ, ರಾಯಚೂರು ಜಿಲ್ಲೆಯೇ ಈತನ ಕಾರ್ಯಕ್ಷೇತ್ರವಾಗಿತ್ತು. ಆದ್ದರಿಂದ ರಾಯಚೂರು, ಮಾನ್ವಿ, ನೀರಮಾನ್ವಿ, ದೇವದುರ್ಗ, ಗೂಗಲ್ಲು, ಗೊಬ್ಬುರು ಹೀಗೆ ಅನೇಕ ಹಳ್ಳಿಗಳ ತಿರುಗಾಡಿ ಗೊಬ್ಬುರು ಸಮೀಪದ ಖಾನಾಪುರದಲ್ಲಿ ಬಂದು ನೆಲೆನಿಂತರು. ಇಲ್ಲಿಯೇ ಕ್ರಿ ಶ 1850 ರಲ್ಲಿ ನಿಧನ ಹೊಂದುತ್ತಾರೆ. ಇಲ್ಲಿ ಈತನ ಗದ್ದುಗೆ ಇದ್ದು,ಪ್ರತಿ ಶಿವರಾತ್ರಿಗೆ ಜಾತ್ರೆ ನಡೆಯುತ್ತದೆ.ತಂದೆ ತಾಯಿಗಳು ಕಾಯಿಪಲ್ಲೆ ಮಾರಿ ದಾಸೋಹಂ ಭಾವನೆಯಿಂದ ಜೀವನ ಸಾಗಿಸುತಿದ್ದರು. ಅದರಿಂದ ಬಂದಿರುವ ಆದಾಯದಿಂದ ತಮ್ಮ ಖರ್ಚಿಗೆ ಹಾಗೂ ತಮ್ಮ ಐದಾರು ವರ್ಷದವನಾಗಿದ್ದ ಬಸವಲಿಂಗ ಶರಣರನ್ನು ಕಲಿಕೆಗೆ ಒತ್ತು ನೀಡುವ ಕಾರಣದಿಂದ ಸಾಲೆಯ ಅಯ್ಯನವರಲ್ಲಿ ಬಿಟ್ಟರು. ಆಗ ಅಯ್ಯನವರ ಶಾಲೆಗಳು ಬಹಳ ಪ್ರಚಾರದಲ್ಲಿ ಇದ್ದವು. ಶಬರ ಶಂಕರ ವಿಳಾಸ, ರಾಜಶೇಖರ ವಿಳಾಸ, ಚೆನ್ನಬಸವ ಪುರಾಣ, ಜೈಮಿನಿ ಭಾರತ, ವ್ಯಾಕರಣ –ಛಂದಸ್ಸುಗಳು, ಜ್ಯೋತಿಷ್ಯ, ಜಮಾ ಖರ್ಚು, ಧನಂಜಯ ನಿಘಂಟು, ಅಮರಕೋಶ ಇವುಗಳನ್ನು ಕಲಿಸುವುದು ಆಗಿನ ಪದ್ಧತಿಯಾಗಿತ್ತು.

"ಬಸವಲಿಂಗನು 10–12 ವರ್ಷದವನಾಗುವವರೆಗೆ ಈ ಅಧ್ಯಯನ ಮುಂದುವರಿಸಿದ. ಆಗ ಮುಸಲ್ಮಾನ ಅರಸರ ಆಳ್ವಿಕೆಯಿಂದ ಉರ್ದು, ಫಾರಸಿ ಮತ್ತು ಅರಬ್ಬೀ ಭಾಷೆಗಳು ಪ್ರಚಾರದಲ್ಲಿದ್ದವು. ತೆಲಗು ಭಾಷೆ ಹಬ್ಬಿದ್ದಿತು. ಬಸವಲಿಂಗಪ್ಪನು ಅವುಗಳನ್ನೂ ಕಲಿತು ಓರಗೆಯವರೊಡನೆ ಬೆರೆತು ಆಟ –ಪಾಠಗಳಲ್ಲಿ ಶ್ರೇಷ್ಠನೆನಿಸಿದ. ಶರಣರ ವಚನಗಳಲ್ಲಿ ಆತನಿಗೆ ಆಸಕ್ತಿಯುಂಟಾಯಿತು. ನಿಜಗುಣರ ತತ್ವಪದಗಳು ಆತನನ್ನು ಆಕರ್ಷಿಸಿದವು. ಇದರಿಂದ ಆತನಲ್ಲಿ ಸುಪ್ತವಾಗಿದ್ದ ಅಧ್ಯಾತ್ಮಿಕ ಜೀವನ ಪ್ರಕಾಶಗೊಳ್ಳತೊಡಗಿತು".[9] ಕೆಲವರು ಹಳ್ಳಿಗಳಲ್ಲಿ ಓದು ಮುಗಿದ ನಂತರ ಪಂಡಿತ ಪದವಿಗಾಗಿ ಕಾಶಿ ಮುಂತಾದ ಸ್ಥಳಗಳಿಗೆ ಹೋಗಿ ಓದಿ ಬರುತ್ತಿದ್ದರು. ಆದರೆ ಬಸವಲಿಂಗಪ್ಪರಿಗೆ ಆರ್ಥಿಕ ತೊಂದರೆಯಿಂದ ಓದು ಇಷ್ಟಕ್ಕೆ ನಿಲ್ಲಿಸಿ ದನ ಕಾಯುವುದಕ್ಕೆ ಹಚ್ಚಿದರು. ಇದು ಸಾಮಾನ್ಯ ಆರ್ಥಿಕತೆಯು ಗ್ರಾಮೀಣ ಜೀವನ ಮುಂದುವರಿಯುತ್ತಿದ್ದೂ ಇದೇ ರೀತಿ.

"ದಿನಾಲೂ ಎಮ್ಮೆ, ಆಕಳು, ಕರುಗಳನ್ನು ಹೊಡೆದುಕೊಂಡು ಊರ ಸಮೀಪದ ಸಿದ್ಧರ ಗುಡ್ಡದ ಕಡೆಗೆ ಹೋಗಿ ಹುಲ್ಲು ಮೇಯಲು ಬಿಡುತ್ತಿದ್ದ. ಇತರ ದನ ಕಾಯುವ ಹುಡುಗರೂ ಈತನೊಡನೆ ಬಂದಿರುತ್ತಿದ್ದರು. ದನಗಳು ಮೇಯಲು ತೊಡಗಿದಂತೆ ಹುಡುಗರು ಆಟವಾಡುತ್ತಿದ್ದರು, ಹಾಡುತ್ತಿದ್ದರು, ಹಾರಾಡುತ್ತಿದ್ದರು, ಸಿಳ್ಳು –ಕೇಕೆ ಹೊಡೆಯುತ್ತಿದ್ದರು. ತಂದ ಬುತ್ತಿಯನ್ನು ಬಿಚ್ಚಿ ಊಟ ಮಾಡಿ ನೀರು ಕುಡಿದು ನಲಿಯುತ್ತಿದ್ದರು. ಅನೇಕ ಸಲ ಬೇರೆ ಹುಡುಗರು ಬಾರದಿದ್ದಾಗ ಬಸವಲಿಂಗ ಒಬ್ಬನೇ ದನಗಳನ್ನು ಮೇಯಿಸುತ್ತಿದ್ದ. ಈತನ ದನಗಳ ಜೊತೆಗೆ ಆಗಾಗ ಬೇರೊಂದು ಆಕಳು ಬಂದು ಸೇರಿಕೊಳ್ಳುತ್ತಿದ್ದಿತು. ಅದು ದಿನಾಲೂ ಬರಹತ್ತಿತು. ಮೇಲೆ ಗುಡ್ಡದಿಂದ ಕೆಳಗಿಳಿದು ಬಂದು ಉಳಿದ ದನಗಳ ಜೊತೆಗೆ ಸಂಜೆಯವರೆಗೂ ಮೇಯ್ದು ಇಳಿಹೊತ್ತಿಗೆ ಅದು ಪುನಃ ಗುಡ್ಡ ಸೇರುತ್ತಿತ್ತು. ಮೊದಮೊದಲು ಈ ಕಡೆಗೆ ಅವನು ಬಹಳ ಗಮನ ಕೊಡುತ್ತಿರಲಿಲ್ಲ. ಆದರೆ ಅದು ಪ್ರತಿನಿತ್ಯ ಬರುತ್ತಿದ್ದುದರಿಂದ ಈತನ ಕುತೂಹಲ ಕೆರಳಿತು. ದಿನಾಲೂ ಅದು ಎಲ್ಲಿಂದ ಬರುತ್ತದೆ ಎಂಬುದನ್ನು ಪತ್ತೇ ಹಚ್ಚುವ ತವಕ ಇವನಿಗೆ ಉಂಟಾಯಿತು. ಸಾಯಂಕಾಲ ಗುಡ್ಡದ ಏರಿಳಿತಗಳಲ್ಲಿ ಅದು ಮರಳುತಿದ್ದಂತೆ ಇವನೂ ಅದರ ಬಾಲ ಹಿಡಿದು ಹಿಂದೆ ಹೋದ. ಅದು ಅನತಿ ದೂರದ ಗವಿಯೊಂದನ್ನು ಹೊಕ್ಕಿತು. ಇವನೂ ಹೊಕ್ಕ. ಅಲ್ಲಿ ಹಲವರು ಸನ್ಯಾಸಿಗಳು ಕಂಡರು. ಅವರೊಡನೆ ಮಾತಾಡಿದ. 'ನಿಮ್ಮ ಆಕಳು ಕಾಯುತ್ತಿರುವುದಕ್ಕೆ ಕೂಲಿ ಕೊಡಿರಿ' ಎಂದು ಅವರನ್ನು ಕೇಳಿದ. ಅವರು ನಕ್ಕು 'ಆಗಲಿ' ಎಂದು ಈತನ ಮಸ್ತಕದ ಮೇಲೆ ತಮ್ಮ ಹಸ್ತವನ್ನಿಟ್ಟು ಆಶೀರ್ವಾದಿಸಿದರಂತೆ. ಈತನ ನಾಲಗೆಯ ಮೇಲೆ ತಮ್ಮ ಬೆರಳುಗಳಿಂದ ಮಂತ್ರವನ್ನು ಬರೆದರಂತೆ. ಆನಂದದಿಂದ ಇವನು ಹಿಂತಿರುಗಿದ".[10]

ಈ ಸಿದ್ಧ ಸನ್ಯಾಸಿಗಳ ಆಶೀರ್ವಾದದಿಂದ, ಬೋಧನೆಯಿಂದ ಅನೇಕ ಆದ್ಯಾತ್ಮಿಕ ವಿಷಯಗಳಾದ ಯೋಗ, ತತ್ವ,ಅನುಭಾವದ ಹಲವು ರಹಸ್ಯಗಳನ್ನು ತಿಳಿದುಕೊಂಡನು. ಮುಂದೆ ಬಸವಲಿಂಗ ಪ್ರಾಪ್ತ ವಯಸ್ಸಿಗೆ ಬಂದಿರುವುದರಿಂದ ಆತನ ತಂದೆ ತಾಯಿಗಳು ಮದುವೆ ಮಾಡಬೇಕು ಎಂದು ನಿರ್ಣಯಿಸಿದರು. ಇದಕ್ಕೆ ಆತನು ನಿರಾಕರಿಸಿದ ಕಾರಣದಿಂದ ಇದ್ದೊಬ್ಬ ಮಗ

ಹೀಗೆ ಮಾಡಿದರೆ ಹೇಗೆ ಎಂದು ವ್ಯಾಕುಲಗೊಂಡರು. ಸಿದ್ಧರ ಗುಡ್ಡದ ಸಾಧುಗಳ ಸಮರ್ಪಕದಿಂದ ಹೀಗಾಗಿರಬೇಕು ಎಂದು ಭಾವಿಸಿ, ದನ ಕಾಯುವುದನ್ನು ಬಿಡಿಸಿ ಕಾಯಿ –ಪಲ್ಯ ಮಾರುವ ಕೆಲಸಕ್ಕೆ ಹಚ್ಚಿದರು. ಯಾವ ವೃತ್ತಿಯಾದರೇನು? ಮೂಲ ಪ್ರವೃತ್ತಿ ಇನ್ನು ಪ್ರಬಲವಾಗುತ್ತ ಹೋಯಿತು.

ವ್ಯಾಪಾರಕ್ಕಾಗಿ ಬಸವಲಿಂಗಪ್ಪನವರು ಬಲಿಚಕ್ರದ ಸುತ್ತಮುತ್ತ ಇರುವ ಹಳ್ಳಿಗಳನ್ನು ಅಡ್ಡಾಡುತ ಕೂಡಲೂರಿಗೆ ಬಂದನು. ಅಲ್ಲಿಯ ಅಕ್ಕಸಾಲಿಗರ ಈಶ್ವರಪ್ಪನವರ ಪರಿಚಯವಾಯ್ತು.ಈ ಕಾರಣದಿಂದ ಕೂಡಲೂರಿಗೆ ಬರುವುದು ಹೆಚ್ಚಾಯಿತು.ಆತನ ಮನೆಯ ಅಂಗಳವೂ ಕಾಯಿ–ಪಲ್ಯ ಮಾರುವ ಸ್ಥಳವಾಯಿತು.ನಂತರ ಉಳಿದ ಕಾಯಿಪಲ್ಲೇ ಬುಟ್ಟಿಗಳಲ್ಲಿ ಹಾಕಿ, ತಕ್ಕಡಿ –ಕಲ್ಲು ಸಹಿತ ಅವರ ಮನೆಯಲ್ಲಿಟ್ಟು ಸಂಗ್ರಹವಾದ ಧಾನ್ಯಗಳನ್ನು ಚೀಲದಲ್ಲಿ ತುಂಬಿ, ಹಣವನ್ನು ಎಣಿಸಿ ಇಟ್ಕೊಂಡು, ಒಂದೆರಡು ತಾಸು ರಾತ್ರಿಯ ಹೊತ್ತಿಗೆ ಬಳಿಚಕ್ರಕ್ಕೆ ಹಿಂದಿರುಗುತ್ತಿದ್ದ. ಹೀಗೆ ದಿನಗಳು ಉರುಳಿದವು.ಕೂಡಲೂರಿನ ಅಕ್ಕಸಾಲಿಗ ಈಶ್ವರಪ್ಪ ಅನುಭಾವಿ ಎಂದು ಹೆಸರು ಮಾಡಿದ್ದ.ಈ ಕಾರಣದಿಂದ ಕಾಯಿಪಲ್ಯ ವ್ಯಾಪಾರದಲ್ಲಿ ಬಿಡುವು ಮಾಡಿಕೊಂಡು ಅಕ್ಕಸಾಲಿಗರ ಈಶ್ವರಪ್ಪನು ವಿವರಿಸುವ ತಾತ್ವಿಕ ವಿಷಯಗಳು ಕೇಳಿ ತಿಳಿದುಕೊಳ್ಳುತ್ತಿದ್ದ. ಆತನೊಡನೆ ಸುದೀರ್ಘವಾಗಿ ಚರ್ಚೆ ಮಾಡಿಕೊಳ್ಳುತ್ತಾ:, ಯೋಗ, ವೇದಾಂತ, ಶರಣರ ವಚನಶಾಸ್ತ್ರ –ಇವುಗಳ ವಿಶೇಷ ಜ್ಞಾನ ಪಡೆದುಕೊಂಡ. ಇದರ ಜತೆಗೆ ಜೀರ್ಣಸಿಕೊಂಡ ತತ್ವಜ್ಞಾನವನ್ನು ಆಚರಣೆಗೆ ತರಲು ಅಪೂರ್ವವಾದ ಸಂಸ್ಕಾರವೂ ಪ್ರಕಟವಾಯಿತು.

"ದಿನಗಳೆದಂತೆ ಸಾತ್ವಿಕ ವೃತ್ತಿ ಬೆಳೆದು ಬರಹತ್ತಿತ್ತು. ಅದು ಈತನ ಸಂಪರ್ಕ ಬಂದ ಜನರೆಲ್ಲರ ಮೇಲೆಯೂ ಪ್ರಭಾವ ಬೀರಿತು. ಈತನ ಪ್ರಾಮಾಣಿಕತನ, ಸಾತ್ವಿಕತೆ ಮೊದಲಾದ ಸದ್ಗುಣಗಳ ಒರೆಗಲ್ಲೆಂಬಂತೆ ಈತನ ಕಾಯಿ –ಪಲ್ಯ ವ್ಯಾಪಾರ ನಡೆಯುತ್ತಿತ್ತು. ಈಶ್ವರಪ್ಪನ ಸಂಗಡ ಬಸವಲಿಂಗಪ್ಪ ಮಾತನಾಡಲು ಹತ್ತಿದರೆ ಹೊತ್ತೇ ಹೋಗುವುದು ಗೊತ್ತಾಗುತ್ತಿರಲಿಲ್ಲ. ಗಿರಾಕಿಗಳು ಬಹಳ ಹೊತ್ತು ನಿಲ್ಲಲ್ಲಿಕ್ಕೆ ಆಗುತ್ತದೆಯೇ? ಅವರು ತಾವೇ ಕಾಯಿಪಲ್ಯ ತೂಗಿಕೊಂಡು, ಅದಕ್ಕೆ ಪ್ರತಿಯಾಗಿ ಕಾಳುಗಳನ್ನು ಚೀಲದ ಮೇಲೆ ಹಾಕಿ ಹೋಗುತ್ತಿದ್ದರು. ಒಮ್ಮೆಲೇ ಸಾಯಂಕಾಲ ಈತ ಅವನ್ನು ತುಂಬಿಕೊಳ್ಳುತ್ತಿದ್ದ. ಎಲ್ಲರೂ ಈತನೊಡನೆ ಅತ್ಯಂತ ಪ್ರಾಮಾಣಿಕತನದಿಂದ ವರ್ತಿಸುತ್ತಿದರು. ಅತ್ತ ತಂದೆ ತಾಯಿಗಳು, ಇತ್ತ ಸ್ನೇಹಿತರು, ಗಿರಾಕಿಗಳ ರೂಪದಲ್ಲಿ ಬಳಿಚಕ್ರ ಮತ್ತು ಕೂಡಲೂರಿನ ಜನಸಾಮಾನ್ಯರು ಈತನಿಂದ ಸಂಪ್ರೀತರಾಗಿದ್ದರು"[11] ಮುಂದೆ ಬಸಲಿಂಗಪ್ಪ ಶರಣರು ಅನುಭಾವಿ ಎಂದು ಪ್ರಸಿದ್ಧನಾಗಿದ್ದ ಕಡಕೋಳ ಮಡಿವಾಳಪ್ಪನಲ್ಲಿಗೆ ಹೋಗಿ ತತ್ವ ಜಿಜ್ಞಾಸುಗಳ ಚರ್ಚೆ ಮಾಡಿ ವಿಷಯವನ್ನು ತಿಳಿದುಕೊಳ್ಳುತ್ತಿದ್ದನು.

**ತತ್ವಗಳ ಪರಿಜ್ಞಾನ**

'ಕುರುಬರೋ ನಾವು ಕುರುಬರೋ' ಎಂಬುದರಲ್ಲಿ;

'ಮೂರಾರು ಏಳ್ಹೈದು ಹತ್ತೆಂಟು ಟಗರವು
ಊರೊಳಗೆ ಹೋದವು ಮಾಯವಾಗಿ
ಬೇರೆ ಇನ್ನೂರ ಹದಿನಾರು ಸಾವಿರ
ಸೂರ್‍ಯಾಗಿ ಹೋಗಿರುವ ಕುರಿಮರಿ ಕಾಯುವಂಥ
..............................................................
..............................................................
ಏಳು ಬೀಳಾಗಲಿ ನೆರೆಯು ಹಾಳಾಗಲಿ
ತೋಳ ಒಯ್ಯಲಿ ನಮ್ಮ ಕುರಿಮರಿಗಳನು
ಕೋಳ ಹೋಗಲಿ ನಮ್ಮ ಹಿಂಡೆಲ್ಲಾ ಬಳಕೊಂಡು
ಭಾಳಾಕ್ಷ ಕೂಡಲೂರೇಶನ ಕರುಣ ಇರುವಂಥ'[12]

ಇದು ಕುರಬರ ವೃತ್ತಿಯನ್ನು ಬಣ್ಣಿಸುವ ಒಂದು ಸ್ವಾರಸ್ಯವುಳ್ಳ ತತ್ವಪದ. ಮೊದಲು ಕುರಬರ ಪ್ರತ್ಯಕ್ಷ ಜೀವನವನ್ನು ವಿವರಿಸಿಕೊಂಡು, ತರುವಾಯ ಅದರ ಒಳತಿಳಿವು ಅರಿಯೋಣ. ಇವು ಮಹತ್ವದ ವಿಷಯಗಳು. ಕುರಿಗಳ ಹಾಗೂ ಕುರಿಹಿಂಡುಗಳ

ಜೀವನವನ್ನು ನಾವು ಪಶುಸಂಗೋಪನೆ ಎಂದು ಕರೆಯಬಹುದು. ಇವುಗಳಲ್ಲಿ ಮೂರು ದೃಷ್ಟಿಯಿಂದ ನೋಡಬಹುದು ಮೊದಲನೆಯದು ಶಾರೀರಿಕ–ಮಾನಸಿಕ ದೃಷ್ಟಿ. ಎರಡನೆಯದು ಸಾಮಾಜಿಕ ರಾಜಕೀಯ ದೃಷ್ಟಿಯಲ್ಲಿ. ಮೂರನೆಯದು:, ನೈತಿಕ – ಪಾರಮಾರ್ಥಿಕ ದೃಷ್ಟಿ. ಈ ರೀತಿ ಕುರಬರ ಬದುಕಿನ ಕುರಿತು ಕೂಡಲೂರೇಶರ ಈ ಸುಲಭ ಪದಕ್ಕೆ ಇಷ್ಟೊಂದು ಕೀಲಿಗಳಿವೆ.

"ಪಾರಮಾರ್ಥಿಕ ವಿಚಾರದ ಬೆಳೆವಣಿಗೆಯ ಇತಿಹಾಸದಲ್ಲಿ –ಅನೇಕ ಮಹನೀಯರು ತಮ್ಮನ್ನು ಕುರುಬರೆಂದು ಕರೆದುಕೊಂಡಿರುವರು. ಶಿಷ್ಯರು ಕುರಿಗಳು, ಗುರುವು ಕುರುಬ. ಕ್ರೈಸ್ತನು ತಾನು ಕುರುಬನೆಂದು ಹೇಳಿದ. ನಾನು ಇದೀಗ ಉಲ್ಲೇಖಿಸಿದ ನಿಂಬರಗಿ ಮಹಾರಾಜರವರು ಸುಮಾರು ಐವತ್ತರಿಂದ ಅರವತ್ತು ವರುಷ ಪ್ರತ್ಯಕ್ಷ ಕುರುಬನ ಬಾಳನ್ನೇ ಬಾಳಿದರು".[13] ಕವಿಯು ತಾನು ಬಹಳ ಕುರಿ ಸಾಕಿದ್ದೇನೆ ಎಂದು ಹೇಳುತ್ತಾನೆ. ಈ ಕುರಿಹಿಂಡಿನಲ್ಲಿ ಆರೈದು ಕೊಬ್ಬಿದ ಟಗರುಗಳು ಸೇರಿ ಅದರೊಳಗೆ ಅಡಿಗಿಕೊಳ್ಳುವವು, ಮಾಯವಾಗಿ ಹೋಗುವವು.ನಂತರ ಕುರಿಗಳೆಲ್ಲ ದಿಕ್ಕುಪಾಲಾಗಿ ಚದುರಿ ಅತ್ತಿತ್ತ ಓಡಿ ಹೋಗುವವು. ಮುಂದೆ ಅವು ಈ ಟಗರುಗಳ ಸಂಪರ್ಕದಲ್ಲಿ ಬರಲು ಬಯಸುವುದಿಲ್ಲ.

"ಈ ರೀತಿ ಕುರಿಗಳೆಲ್ಲ ಚದುರಿ ಹೋದ ಮೇಲೆ, ಕುರುಬನಾದ ತನಗೆ ಏರು ಹಾಳಾದರೂ ಅಷ್ಟೇ, ಇಳುವು ಬೀಳಾದರು ಅಷ್ಟೇ. ಅಲ್ಲಿ ಕುರಿಗಳಿದ್ದರೂ ಅಷ್ಟೇ, ಇಲ್ಲದಿದ್ದರೂ ಅಷ್ಟೇ ಎನಿಸುವುದಂತೆ. ತೋಳಗಳು ಕುರಿಗಳನ್ನು ಆಕ್ರಮಿಸಿ, ಅವನ್ನು ಸೆಳೆದೊಯ್ದರೂ ಇವನಿಗೆ ಅದರ ಪರಿವೆ ಇರುವುದಿಲ್ಲ. ಭಗವಂತನನ್ನು ನೆನೆದು ಭಾಳಾಕ್ಷಹರನ ರೂಪವನ್ನು ಕಾಣುವುದೇ ಅವನ ಏಕಮೇವ ಕೆಲಸವಾಗುವುದು ಎಂದು ಕವಿಯು ಸೂಚಿಸುತ್ತಾನೆ".[14] ಇಲ್ಲಿ 'ಭಾಳಾಕ್ಷಹರ' ಎಂಬ ಮಹತ್ವದ ಶಬುದ. 'ಭಾಳ' ಅಂದರೆ ಹಣೆ, 'ಅಕ್ಷ' ಅನ್ನುವುದು ಕಣ್ಣು ಎಂದರ್ಥ.ಇದು ಹುಬ್ಬುಗಳ ಮಧ್ಯ ಇರುವ ಶಿವನ ಮೂರನೆಯ ಕಣ್ಣು. ಈ ಮೂರನೆಯ ಹಣೆಗಣ್ಣನ್ನು ಕಂಡವರು ಅದೆಷ್ಟು ಜನ? ನಾವು ಎರಡು ಕಣ್ಣುಗಳನ್ನಾದರೂ ಕಾಣಬಲ್ಲೆವೇ? ಈ ಮೂರನೇ ಕಣ್ಣು ಕಾಣುವ ದೂರ ಉಳಿದ ಮಾತು. ಆತನು ಹೇಳುತ್ತಿರುವುದು ಅರಿವಿನ ಕಣ್ಣಿನ ದೇವರನ್ನು, ಸಾಕ್ಷಾತ್ಕರಿಸಿಕೊಳ್ಳಲು ನೇರವಾಗುವಂತೆ ಬದುಕುವುದು ನಮ್ಮ ಕರ್ತವ್ಯ ಎಂದು. ಹಾಗೇ ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ಎಂಬಂತೆ ಸಾಕ್ಷಾತ್ಕಾರದಲ್ಲಿಯೂ ಹಲವು ಹಂತಗಳಿವೆಂದು ಕಾಣುತ್ತದೆ. ಪರಮತ್ವವನ್ನು ತಿಳಿದ ಬಸವಲಿಂಗಪ್ಪನು ಈ ಕೆಳಗಿನ ತತ್ವಪದಗಳಲ್ಲಿ ಅತಿಂದ್ರೀಯಜ್ಞಾನದ ಕುರುಹು ಸ್ಪಷ್ಟವಾಗಿ ವಿವರಿಸುತ್ತಾನೆ;

"ಯಾತರಿಂದಲಿ ಮಾಡಲಿ ಆತ್ಮನ ಪೂಜೆ
ಎತ್ತ ನೋಡಲು ತಾನೆ ತಾನಾಗಿಹುದು
ನಿತ್ಯ ನಿರಾಳ ನಿರಂಜನ ನಿರ್ಗುಣ
ಆತ್ಯಧಿಕಾನಂದ ಪರಿಪೂರ್ಣ ಬ್ರಹ್ಮವು" ॥ಪ॥

"ಇಷ್ಟಲಿಂಗವ ನೋಡಿರೋ –ನಿರ್ಭಯಲೊಳು
ಇಷ್ಟಲಿಂಗವ ನೋಡಿರೋ
ಅಂಗಕ್ಕೆ ನಿಲುಕದ ಮಂಗಳ ಮೂರುತಿ
ಸಂಗರಹಿತ ನಿಜಲಿಂಗನ ನೋಡಿರೋ" ॥ಅ. ಪ॥

"ಯಾರ ಹಂಗು ನಮಗೇನೋ
ಗುರು ತೋರಿದ ನಿಜವನ್ನು
ಧರೆಯೊಳು ಪರತರ ಪರಮನೊಳು
ಬೆರೆತು ನಿಂತು ಬಯಲಾದಾಗವಗೆ॥"[15]

ಹೀಗೆ ಪ್ರತಿ ಚರಣದಲ್ಲಿ ಸಾಕ್ಷಾತ್ಕರವನ್ನು ಮಿಂದು ಮಡಿಯಾಗಿರುವ ಈ ಪದ್ಯಗಳಿಗೆ ವಿವರಣೆಯನ್ನು ಬಯಿಸುವುದಿಲ್ಲ. ಇವುಗಳಲ್ಲಿ ಪರಮ ತತ್ವವೇ ಹುಚ್ಚು ಹೊಳೆಯಾಗಿ ಹರಿಯುತ್ತಿವೆ.

"ಇನ್ಯಾಕೆ ಎನ ಮದಿವೆ ಚಿಂತೆ ನಿಮಗೆ
ಎನ್ನ ಗುರು ತಂದೆ ಲಿಂಗವನು ಕೊಟ್ಟ ಬಳಿಕ!!

ಹೆಣ್ಣೆ ಬಾ ನೀನೆಂದು ಎಣ್ಣೆ ಅರಿಷಿಣ ಹಚ್ಚಿ
ತನ್ನ ನಿರಾಕರ ನೀರನೆರೆದು
ಬಣ್ಣ ಬಿಳಿದುಡಿಸಿ ಬಾಸಿಂಗವನೆ ತಂದು
ಕಣ್ಣಿಗೆ ಗೋಚರವಾಗಿ ಕಟ್ಟಿದ ಬಳಿಕ"[16] ಎಂದು ಹೇಳುವ ಈ ತತ್ವಪದದಲ್ಲಿ ಲೌಕಿಕ ಜೀವನದ ಆಳ –ಅಗಲವನ್ನು ತಿಳಿದುಕೊಂಡು ಅಲೌಕಿದಕಡೆ ಮುಖಿಯಾಗುತ್ತಾನೆ.

ಇಲ್ಲಿ ಎಲೆ ಹೆಣ್ಣೆ ಬಾ ಎಂದು ಕರೆಯುವುದು, ಅರಿಷಿಣ ಹಚ್ಚಿ, ನೀರನ್ನು ಎರೆದು, ಬಿಳಿಯ ಬಣ್ಣದ ಬಟ್ಟೆ ಉಡಿಸಿ, ಬಾಸಿಂಗವನ್ನು ಕಟ್ಟುವುದು. ತನಗೆ ಒಲಿದು ಬಂದ ಸುಂದರವಾದ ಕಣ್ಣು ಮೂಗುನ್ನು ಹೊಂದಿರುವ ಬಾಲೆಗೆ ತಾಳಿ ಕಟ್ಟುವುದು. ಆಸನ ಎನ್ನುವ ಸೇಸೆಯ ಕಟ್ಟೆಯ ಮೇಲೆ ಮನಸ್ಸೆಂಬ ಅಕ್ಷತೆಗಳು ಹಾಕುವುದು. ವಿವಿಧ ಕಳೆಗಳುಳ್ಳ ಮುತ್ತೈದೆಯರು ಸ್ನಾನ ಮಾಡಿಸಿ ನೀನೆ ಈಶ್ವರನೆಂದು ಶೋಭಾನ ಹಾಡುತ್ತಾನೆ ಎನ್ನುವುದು.ಪಂಚತತ್ವಗಳಿಂದ ಕಲಶ ಮಾಡಿ ಕಿವಿಯಲ್ಲಿ ಮಂತ್ರ ಊದಿ ಹಣೆಯಲ್ಲಿ ವಿಭೂತಿ ಬರೆದು ಸೆರಗು ಗಂಟು ಹಾಕಿ, ನೆರೆದ ಜನಕ್ಕೆ ಗುರುಗಳೇ ಬಂದು ನಿಬ್ಬಣಕ್ಕೆ ಅಪ್ಪಣೆ ಮಾಡುತ್ತಾನೆ ಎಂದು ಚಿತ್ರಿಸುವುದು ಇದೊಂದು ಸಾಮಾನ್ಯವಾಗಿ ಕಾಣುತ್ತದೆ. ಆದರೆ ಕೇವಲ ಲೌಕಿಕ ಜೀವನದ ಹೆಣ್ಣು –ಗಂಡು ನಡುವಿನ ಸಂಬಂಧ ಕುರಿತು ಹೇಳುವ ಆತನ ಇರಾದೆಯಲ್ಲ. ಹೆಣ್ಣು ಗುರುವಿನ ಜತೆಗೆ ನೋಡುವುದು ಗಂಡು ಶಿಷ್ಯನೊಂದಿಗೆ ನೋಡುವುದು. ಇನ್ನೊಮ್ಮೆ ಶಿಷ್ಯನನ್ನು ಹೆಣ್ಣಾಗಿ ನೋಡುವುದು ಗುರುವನ್ನು ಗಂಡುವಿನೊಂದಿಗೆ ನೋಡುವುದು ಒಂದು ವಿಚಿತ್ರ ಪ್ರಮೇಯವನ್ನು ಮಂಡಿಸುತ್ತಾನೆ.

ಇದು ಭಾರತೀಯ ದಾರ್ಶಿನಿಕ ಚಿಂತನೆಯಲ್ಲಿ ಮತ್ತೆ ಮತ್ತೆ ಇದಿರುಗೊಳ್ಳುತ್ತದೆ. "ಅನುಭಾವಿಕ ವಿಶಿಷ್ಟವಾದ ಅರಿವು ಮತ್ತು ಅನುಭವಗಳನ್ನು, ಅದರ ಲೌಕಿಕ ಮತ್ತು ಪಾರಮಾರ್ಥಿಕ ಆಯಾಮಗಳ ಜತೆ, ಸಾಮಾನ್ಯ ಜನರಿಗೂ ಲಭ್ಯವಾಗಿಸಿದ್ದು ಭಾರತದ ಗುರುಪಂಥಗಳ ವಿಶಿಷ್ಟತೆ. ಈ ಚಾರಿತ್ರಿಕ ಸತ್ಯವನ್ನು ಒಂದು ತತ್ವಪದವು "ಹಾದಿಹಾದಿಗೆ ಬಿದ್ದಿಹುದು ಗುರುಸಾಧುಗಲ್ಲದೆ ಕಾಣಿಸದಣ್ಣ ಎಂದು ಸೂಚ್ಯವಾಗಿ ವಿವರಿಸುತ್ತದೆ. ದೊಡ್ಡ ದೊಡ್ಡ ತತ್ವಗಳು ಹಾದಿಬೀದಿಯಲ್ಲಿವೆ. ಅವನ್ನು ಕಾಣಲು ಹೊಸಕಣ್ಣನ್ನು ಪಡೆದುಕೊಳ್ಳಬೇಕು".[17]

ಯಾಕಂದರೆ ಈ ತತ್ವಪದಗಳು (ಭಜನೆ) ಊರು ಗುಡಿಯಲ್ಲಿ ರಾತ್ರಿಹೊತ್ತು ಅಥವಾ ಸತ್ತವರು ಮುಂದೆ ಹಾಡು ಹುಟ್ಟಿಕೊಂಡು ಗುರುವನ್ನು ದ್ಯಾನಿಸಿಕೊಳ್ಳುತ್ತಾರೆ. ಅದರಲ್ಲಿ ಅಮಾವಾಸ್ಯೆ ಇವರಿಗೆ ಸಂಭ್ರಮಿಸುವ ದಿನವೂ ಹೌದು. ಆದ್ದರಿಂದ ಈ ಗುರುಪಂಥವು ಬಲಿಷ್ಠ ಜಾತಿ ಅಥವಾ ಸ್ಥಾಪಿತ ಧರ್ಮದ ಸ್ವತ್ತುವಾಗಿರುವುದಿಲ್ಲ. ಅದು ದುಡಿಯುವ ಜನರ ಆಸ್ತಿ, ಆಯಾಸು ಕಳೆದುಕೊಳ್ಳುವ ಫಲವಾಗಿ ರೂಪಾಂತರ ಮಾಡಿಕೊಳ್ಳುವ ಸಾಧನಾ ಮಾರ್ಗವು ಹೌದು.

ಹಾಗೇ ಬಸವಲಿಂಗಪ್ಪನಿಗೆ ಅನೇಕ ಜಾತಿಯ ಜನರೊಂದಿಗೆ ಒಳ್ಳೆ ಸಂಬಂಧ ಅವುಗಳ ಬಗ್ಗೆ ಜ್ಞಾನ ಇತ್ತು.ಅದಕ್ಕೆ ಇನ್ನೊಂದು ಅವರ ತತ್ವಪದವಾದ; 'ಕೊರವಿ ಬಂದಾಳೋ ಜ್ಞಾನದ ಕೊರವಿ ಬಂದಾಳೋ ' ಎಂಬುದರಲ್ಲಿ ಕೊರವಿ ಬಂದಿದ್ದಾಳೆ. ಈಕೆ ಜ್ಞಾನದ ಕೊರವಿ. ಕರುಣೆಯಿಂದ ಕಲ್ಮಶ ತೊಳೆಯುವಳು. ಇವಳು ಹೊಳೆಯುವ ಮುತ್ತು, ಸರ ಹಾಕಿಕೊಂಡು ಸತ್ಯದ ಗದ್ದುಗೆ ಏರಿದ್ದಾಳೆ. ಅವಳು ಯೋಗದಲ್ಲಿ ಬೆರೆತು ಸುಳಿದಾಡುವಳು, ಆರೂಡರ ಬಳಿ ಡಂಗುರ ಸಾರುತ್ತಾಳೆ.ಶರಣ ಜನರಿಗೆ ಕಣಿ ಹೇಳುವಳು, ಕೂಡಲೂರೇಶನ ಪ್ರೀಯಳು ತಾನೆಂದೂ ಈ ಕೊರವಿ ಹೇಳುತ್ತಾಳೆ ಎಂದು ಚಿತ್ರಿಸುತ್ತಾನೆ. ಇದರಲ್ಲಿ ಬಹಳ ಮುಖ್ಯವಾಗಿ ಸಂಗೀತದ ಭಾಷೆಯ ಕುರಿತು ಹಾಗೂ ಜ್ಞಾನದ ಅರಿವು ಕುರಿತು ಹೇಳುವುದು ಅವನು ಮುಖ್ಯ ಆಶಯ. ಹೀಗೆ ಅನೇಕ ತತ್ವಪದಗಳು ಬಸವಲಿಂಗಪ್ಪನವರು ರಚನೆ ಮಾಡಿದ್ದಾರೆ. ಇವರ ತತ್ವಪದಗಳಲ್ಲಿ ಈ ನಾಡಿನ ಸಮುದಾಯಗಳಿಗೆ ಚಲನಶಕ್ತಿಯಾಗಿ ಅನೇಕ ಬಗೆಯ ರೂಪಾಂತರಗೊಂಡಿವೆ.

**ಕೊನೆ ಟಿಪ್ಪಣಿ**

1) ಶಾಸ್ತ್ರೀಮಠ ಎಂ. ಜಿ, ಕೂಡಲೂರು ಬಸವಲಿಂಗ ಶರಣರು, ಪುಟ.24

2) ಶಾಂತರಸ, ಕೂಡಲೂರು ಬಸವಲಿಂಗ ಶರಣರ ಸ್ವರವಚನಗಳು, ಪ್ರಸ್ತಾವನೆ –ಪುಟ. ಥು

3) ಕೆ.ಸಿ. ಶಿವಪ್ಪ, ಬೆಂಗಳೂರು ವಿಶ್ವವಿದ್ಯಾಲಯದ ಪ್ರಕಟಣೆ :(ಸಂಪುಟ –05),ಪುಟ.480

4) ಶಾಸ್ತ್ರೀಮಠ ಎಂ.ಜಿ,ಕೂಡಲೂರು ಬಸವಲಿಂಗ ಶರಣರು, ಪುಟ.25

5) ಕಡಕೋಳ ಮಡಿವಾಳೇಶ್ವರ ಸ್ವರವಚನ –ಪ್ರಸ್ತಾವನೆ, ಪುಟ.11(ಜ. ತೋಂ. ಮಠ ಗದಗ)

6) ಶಾಸ್ತ್ರೀಮಠ ಎಂ.ಜಿ,ಕೂಡಲೂರು ಬಸವಲಿಂಗ ಶರಣರು, ಪುಟ.25

7) ದ್ಯಾಂಪುರ ಕಲ್ಲಿನಾಥ ಕವಿಕೃತ ಶ್ರೀಶರಣಬಸವೇಶ್ವರ ಪುರಾಣ(ಮುರಘಾಮಠ ಪ್ರಕಟಣೆ), ಪುಟ.31

8) ಶಾಸ್ತ್ರೀಮಠ ಎಂ.ಜಿ,ಕೂಡಲೂರು ಬಸವಲಿಂಗ ಶರಣರು, ಪುಟ.25

9) ಅದೇ, ಪುಟ.27

10) ಅದೇ, ಪುಟ.28

11) ಅದೇ, ಪುಟ.31

12) ರಹಮತ್ ತರೀಕೆರೆ (ಸಂ), (ಸಂಪುಟ 1) ತತ್ವಪದ ಪ್ರವೇಶಿಕೆ, ಪುಟ.68

13) ಅದೇ, ಪುಟ.68

14) ಶಾಸ್ತ್ರೀಮಠ ಎಂ.ಜಿ,ಕೂಡಲೂರು ಬಸವಲಿಂಗ ಶರಣರು, ಪುಟ.82

15) ಅದೇ, ಪುಟ.84

16) ರಹಮತ್ ತರೀಕೆರೆ, ಕರ್ನಾಟಕ ಗುರುಪಂಥ, ಪುಟ.02